ಮೈಸೂರ ಗೆಜೆಟ್

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವೆಂಬರ್ ತಾ|| 12, ಸ್ರ 1887.

ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟ್ರರು, ಚೀಫ್ ಜಡ್ಜ್ರೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫೈನ್ಯಾಷಿಯಲ್ ಇಲಾಖೂ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್ಗಳನ್ನು ಎಫ್ಫೇಸ್ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟೂದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಜೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫ್ಫೇಸ್ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಕಾಂಪ್ಟ್ರೋಲರ್ ಸಾಹೇಬರವರಿಂದ.

ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಜಾತಾ ಟ್ರೆಜರೀ ಆಫೀಸರ್ಗಳ್ಗೆ.

ಸರ್ಕ್ಯುಲರ್ ನಂ. 1694 ತಾರೀಖು 3ನೇ ನವೆಂಬರ್ ಸ್ರ 1887.

ಲೈಸೆನ್ಸು ಪಡೆದಿರುವ ಸ್ಟ್ಯಾಂಪು ವೆಂಡರ್ಗಳು ಹುಕ್ಕುಂ ಮೇರೆ ಯಿಟ್ಟ್ಯು ಯಿರಬೇಕಾದ ಲೆಕ್ಕಗಳು ಕ್ರಮವಾಗಿ ತನಖೀ ಆಗುವದಿಲ್ಲವೆಂದು ಸಂದೇಹ ಪಡಲು ತಕ್ಕ ಕಾರಣ ವುಂಟಾಗಿ ಯಿರುವದ್ದರಿಂದ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಜಾತ ಟ್ರೆಜರೀ ಆಫೀಸರ್ಗಳು 1870ನೇ ಇಸವಿ ಸೆಪ್ಟಂಬರ್ 29ನೇ ಮು ರ್ಕುಂ 807ನೇ ನಂ. ಈ ಆಫೀಸ್ ಸರ್ಕ್ಯುಲರಿನಲ್ಲಿ ನಮೂದಿರುವ 11 ಮತ್ತು 12ನೇ 11 ಸ್ಟ್ಯಾಂಪು ವೆಂಡರ್ಗಳು ಕ್ರಮವಾಗಿ ಲೆಕ್ಕಗಳು ಯಿಡತಕ್ಕ ಬಗ್ಯೆ ಅವರ ಲೆಕ್ಕದಬು

ಕ್ಕುಗಳನ್ನ ಆ ಯಾ ಟ್ರೆಜರೀ ಆಫೀಸರ್‌ಗಳು 3 ತಿಂಗಳಿಗೆ ಬಂದಾವರ್ತಿ ತರಿಸಿ ತನಖೀ ಮಾಡ ತಕ್ಕದ್ದು.

12. ನಗದು ಹಣಕ್ಕೆ ಸ್ಟ್ಯಾಂಪುಗಳನ್ನ ಖರೀ ದೀಮಾಡುವ ಸ್ಟ್ಯಾಂಪು ವೆಂಡರ್‌ಗಳು ನಂ. 2ನೇ ರೋಜ್ ಲೆಕ್ಕ ಮಟ್ಟಿಗೆ ಯಿಡಬೇಕಾಗಿ ಇರುತ್ತೆ. ರೂಲ್‌ಸ್‌ಗಳಿಗೆ ನಿಗಾ ಕೊಡಬೇಕು. ತಾತ್ಕಾಲದ ಅವಲೋಕನಕ್ಕಾಗಿ ಸದರೀ ರೂಲ್‌ಸ್‌ಗಳನ್ನ ಇದರ ಬಾಜೂದಲ್ಲಿ ಛಾಪಿಸಿ ಯಿರುತ್ತೆ. ಸದರೀ ರೂಲ್ಸ್‌ಗಳ ಮೇರೆ ಸ್ಟ್ಯಾಂಪು ವೆಂಡರ್‌ಗಳ ಲೆಕ್ಕುಗಳನ್ನ ಮೂರು ತಿಂಗಳಿಗೆ ಬಂದಾವರ್ತಿ ತನಖೀ ಮಾಡಲ್ಪಡ ಬೇಕಾದ ವಿಷಯದಲ್ಲಿ ಯಿನ್ನು ಮೇಲೆ ತಕ್ಕ ನಿಗಾ ಕೊಡಬೇಕೆಂದು ಕೋರಿ ಯಿರುತ್ತೆ. ಸದರೀ ಲೆಕ್ಕುಗಳು ಛರ್ತಿಯಾಗಿ ಬರದಮೇಲೆ ಸ್ಟ್ಯಾಂಪು ವೆಂಡರ್‌ಗಳಿಗೆ ರೇದೀ ಕೊಟ್ಟು ಸದರೀ ಲೆಕ್ಕುಗಳನ್ನ ಅವರಿಂದ ತೆಗದುಕೊಂಡು ಟ್ರೆಜರೀ ರಿಕಾರ್ಡಿನಲ್ಲಿ ಭದ್ರವಾಗಿ ಯಿಡತಕ್ಕದ್ದು.

ಎ. ರಂಗಸ್ವಾಮಿಐಯ್ಯಂಗಾರ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖೆ.

ತಾರೀಖು 11ನೇ ಅಕ್ಟೋಬರ್ 1887.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯ ಕಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಸೂಪರ್‌ಟೆಂಡೆಂಟರವರಿಂದ ಸ್ಯ 1887ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ.		ಹಿಡಿಯಲ್ಪಟ್ಟ ತಿಂಗಳು.	ಷರಾ.
			ಅಡಿ.	ಅಂಗುಲ.		
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರೆಲ್	
2	ಸದಾಶಿವ ..	ಗಂಡು	4	5	ಡಿಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟೋ ಆಗಸ್ಟ್	

ಷರತ್ತುಗಳು—ಶೇಕಡಾ 25 ರೂಪಾಯಿ ಪ್ರಕಾರ ಶೇವಣಿ ಮೊಬಲಗನ್ನು ಕೂಡ್ಲೆ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡತಕ್ಕು, ಇದಕ್ಕೆ ತಪ್ಪಿದರೆ ಶೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನ್ಹಃ ಹರಾಜ್ ಮಾಡಲ್ಪಡುವವು ನಷ್ಟಕ್ಕೆ ಅವಲ್ ಖರೀದೀದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಅದರಲ್ಲಿ ಆತನಿಗೆ ಯೇನೂ ಸಲ್ಲಲಾರದು.

ಖರೀದಿ ತಾರೀಖು ಲಾಗಾಯಿತು ಖರೀದಿದಾರನೇ ಆನೆಗಳ ರಾತೀಪು ವಗೈರೆ ಖರ್ಚುಗಳನ್ನ ವಹಿಸತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡಿಪ್ಯುಟೆ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟ್—ಶಿಕಾರಿಪುರದ ಕೋರ್ಟ	10ನೇ ನವೆಂಬರ್ 1887.	ಹೆಚ್ಚು ಕಡಮೆ	250 ರೂಪಾಯಿಗಳು.
ಅನಂತಪುರದ ಕೋರ್ಟ	14ನೇ ಡಿಟೋ	..	50 ಡಿಟೋ
ಶಿವಮೊಗ್ಗಾ ಡಿಟೋ	19ನೇ ಡಿಟೋ	..	500 ಡಿಟೋ
ತೀರ್ಥಹಳ್ಳಿ ಡಿಟೋ	25ನೇ ಡಿಟೋ	..	200 ಡಿಟೋ
ಕಡೂರು ಡಿಸ್ಟ್ರಿಕ್ಟ್—ಚಿಕ್ಕಮಗಳೂರು ಕೋರ್ಟ	1ನೇ ಡಿಸೆಂಬರ್ 1887.	..	200 ಡಿಟೋ
ಹಾಸನ ಡಿಸ್ಟ್ರಿಕ್ಟ್—ಹಾಸನ ಕೋರ್ಟ	7ನೇ ಡಿಟೋ	..	300 ಡಿಟೋ
ಮೈಸೂರು ಡಿಸ್ಟ್ರಿಕ್ಟ್—ಶ್ರೀರಂಗಪಟ್ಟಣ ಕೋರ್ಟ	12ನೇ ಡಿಟೋ	..	800 ಡಿಟೋ
ಹುಣಸೂರು ಡಿಟೋ	16ನೇ ಡಿಟೋ	..	
ಬೆಂಗಳೂರು ಡಿಸ್ಟ್ರಿಕ್ಟ್—ಬೆಂಗಳೂರು ಕೋರ್ಟ	20ನೇ ಡಿಟೋ	..	150 ಡಿಟೋ

ಷರಾಜಿನ ಪರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ಕುಂಗಳ 34, 35ನೇ ನಂಬರು ಗೆಜೆಟ್ ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಮೈಸೂರು ರೆವಿನ್ಯೂ ಸರ್ವೆ ಸೆಟ್ಲ್‌ಮೆಂಟ್ ಇಲಾಖೆ.

ನಂ. 586. ತಾರೀಖು 21ನೇ ಅಕ್ಟೋಬರ್ 1887.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ಪ್ರಕಟಿಸಲ್ಪಡುವದೇನಂದರೆ, ಸ್ ಱ 1887—88 ಸರ್ವೆ ಅಯಾಂ ಕಾಲದಲ್ಲಿ ಇದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ಮೆಜರಿಂಗ್ ಯಾನೆ ಮೋಜಣಿ, ಕ್ಲಾಸಿಫಿಕೇಷ್ಯನ್ ಯಾನೆ ಪ್ರತಿಬಂದಿ ಮತ್ತು ಸೆಟಲ್‌ಮೆಂಟ್ ಯಾನೆ ತರಂ ಫೈಸಲ್ ಕೆಲಸಗಳು ನಡಿಸಲ್ಪಡುವವು.

ಡಿಸ್ಟ್ರಿಕ್ಟ್.	ತಾಲ್ಲೂಕು.	ಕೆಲಸ ಶುರುವಾಗತಕ್ಕ ಶುಮಾರು ತಾರೀಖು.	ಷರಾ.
	ಮೋಜಣಿಯು.		
ಮೈಸೂರು ..	ಮಲ್ವಳ್ಳಿ	1ನೇ ನವೆಂಬರ್ 1887	
ಡಿಟೋ ..	ತಿರುಮಕೂಡ್ಲು ನರಸೀಪುರ	ಡಿಟೋ	
ಡಿಟೋ ..	ಚಾಮರಾಜನಗರ್	ಡಿಟೋ	
ಡಿಟೋ ..	ನಂಜನಗೂಡು	ಡಿಟೋ	
ಬೆಂಗಳೂರು ..	ಕೋಲಾರ್‌ಪೇಟೆ	ಡಿಟೋ	
ಡಿಟೋ ..	ಕಾನಕಾನಹಳ್ಳಿ	1ನೇ ಫಿಬ್ರವರೀ 1888	
ಕಡೂರು ..	ಶೃಂಗೇರಿಜಹಗೀರ್	1ನೇ ಜನವರೀ 1888	
	ಪ್ರತಿಬಂದಿಯು.		
ಕೋಲಾರ ..	ಕೋಲಾರ	1ನೇ ನವೆಂಬರ್ 1887	
ಡಿಟೋ ..	ಬವರಿಂಗ್‌ಪೇಟೆ	ಡಿಟೋ	
ಮೈಸೂರು ..	ಶ್ರೀರಂಗಪಟ್ಟಣ	1ನೇ ಫಿಬ್ರವರೀ 1888	
	ತರಂ ಫೈಸಲ್.		
ಮೈಸೂರು ..	ಮಂಡ್ಯ	1ನೇ ಮಾರ್ಚೀ 1888	
ಡಿಟೋ ..	ನಾಗಮಂಗಲ್	15ನೇ ಏಪ್ರಿಲ್ 1888	

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಮೈಸೂರ್ ರೆವಿನ್ಯೂ ಸರ್ವೆ.